# ಹಿಂದೂ–ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ‘ಮೊಹರಂ’

**ಅನಿಲ**[*]

**DOI: https://doi.org/10.5281/zenodo.21188914**

**ABSTRACT**

ಭಾರತದ ಸಂಸ್ಕೃತಿಯು ವಿಶ್ವದಲ್ಲಿಯೇ ವಿಶಿಷ್ಟವಾದ ಸಂಸ್ಕೃತಿ. ‘ವೈವಿಧ್ಯತೆಯಲ್ಲಿ ಏಕತೆ’ ಎಂಬ ತತ್ವಕ್ಕೆ ಭಾರತದ ಗ್ರಾಮೀಣ ಪ್ರದೇಶಗಳು ಅತ್ಯುತ್ತಮ ನಿದರ್ಶನಗಳಾಗಿವೆ. ಇಲ್ಲಿ ಧರ್ಮಗಳು ಕೇವಲ ಸಾಂಸ್ಥಿಕ ಚೌಕಟ್ಟುಗಳಾಗಿ ಉಳಿಯದೆ, ದೈನಂದಿನ ಬದುಕಿನ ಭಾಗವಾಗಿ ಪರಸ್ಪರ ಬೆರೆತು ಹೋಗಿವೆ. ಈ ಸೌಹಾರ್ದ ಸಂಸ್ಕೃತಿಗೆ ಕರ್ನಾಟಕದಲ್ಲಿ ಪ್ರಮುಖ ಸಾಕ್ಷಿಯಾಗಿ ನಿಲ್ಲುವುದು ‘ಮೊಹರಂ ಆಚರಣೆ’. ಕೋಮು ಸೌಹಾರ್ದತೆ ಎಂದರೆ ಕೇವಲ ವಿಭಿನ್ನ ಧರ್ಮದ ಜನರು ಒಟ್ಟಿಗೆ ಶಾಂತಿಯುತವಾಗಿ ವಾಸಿಸುವುದು ಮಾತ್ರವಲ್ಲ; ಅದು ಪರಸ್ಪರ ವಿಶ್ವಾಸ, ಸಹಿಷ್ಣುತೆ ಮತ್ತು ಸಹಬಾಳ್ವೆಯ ಬದುಕನ್ನು ಕಟ್ಟಿಕೊಳ್ಳುವುದಾಗಿದೆ.

ಧರ್ಮಗಳು ಜನರ ಬದುಕನ್ನು ಮುಕ್ಕಾಗಿಸುವ, ಮನಸುಗಳನ್ನು ಮುರಿಯುವ ಈ ಹೊತ್ತಿನಲ್ಲಿ ಹೃದಯದ ಬಿಂಬವೂ ಆಗಿರುವ ಮೊಹರಂ ಜನರ ಬದುಕನ್ನು ಸದಾ ಎಚ್ಚರಿಸುತ್ತಲೇ ಇರುತ್ತದೆ. ಬದುಕಿನ ವಿಕೃತಿಗಳನ್ನು ಗುರುತಿಸುವ ವಾಸ್ತವಿಕ ದೃಷ್ಟಿ, ಮತ್ತು ಅಸ್ತಿತ್ವದ ಸೂಕ್ಷ್ಮ ಸ್ತರಗಳ ಅನಾವರಣಗೊಳಿಸುವ ತೀಕ್ಷ್ಣ ಒಳನೋಟದ ದಾಖಲೆಯಾಗಿಯೂ ಈ ಹಬ್ಬ ನಮ್ಮ ಮುಂದಿದೆ. ಉಡುವ ಬಟ್ಟೆ, ಉಣ್ಣುವ ಊಟ, ನಡೆದಾಡುವ ಕಾಲ ಎಲ್ಲವೂ ರಾಜಕಾರಣಗೊಳ್ಳುತ್ತಿರುವ ಈ ದೇಶದಲ್ಲಿ ಬಹುತ್ವ ತನ್ನತನ ಕಳೆದುಕೊಳ್ಳದೆ ಕರ್ನಾಟಕ ಬಹುತ್ವದ ನಾಡಾಗಿಯೇ ಉಳಿಯಬೇಕೆಂಬ ಆಶಾವಾದ ನನ್ನದು. ನೂರಾರು ವರ್ಷಗಳಿಂದ ಗ್ರಾಮೀಣ ಭಾರತದಲ್ಲಿ ನಡೆದುಕೊಂಡು ಬಂದಿರುವ ಹಿಂದೂ–ಮುಸ್ಲಿಂ ಸೌಹಾರ್ದತೆಯ ನೆಲೆಗಳನ್ನು ಹುಡುಕುವುದು ಪ್ರಸ್ತುತವಾಗಿದೆ. ಮುಸ್ಲಿಂ ಬಾಂಧವರೇ ಇಲ್ಲದ ಹಳ್ಳಿಗಳಲ್ಲಿ ಹಿಂದೂಗಳೇ ಮೊಹರಂ ಹಬ್ಬವನ್ನು ಮುಂಚೂಣಿಯಲ್ಲಿ ನಿಂತು ಆಚರಿಸುವ ಅಪರೂಪದ ಸಂಪ್ರದಾಯವನ್ನು ವಿಶ್ಲೇಷಿಸುವುದು ಈ ಅಧ್ಯಯನದ

* **ಅನಿಲ,** ಸಂಶೋಧನಾ ವಿದ್ಯಾರ್ಥಿ, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಮುಖ್ಯ ಆಶಯವಾಗಿದೆ.

**KEYWORDS:** ಕಾರ್ಬಲಾ, ಪೀರ್, ಹಜರತ್, ಪಂಜಾ, ಶಿಯಾ, ರಿವಾಯತ್, ಹಿಜರಿ ಶಕೆ.

## ಪ್ರಸ್ತಾವನೆ:

ಭಾರತದ ಸಂಸ್ಕೃತಿಯು ವಿಶ್ವದಲ್ಲಿಯೇ ವಿಶಿಷ್ಟವಾದ ಸಂಸ್ಕೃತಿ. 'ವೈವಿಧ್ಯತೆಯಲ್ಲಿ ಏಕತೆ' ಎಂಬ ತತ್ವಕ್ಕೆ ಭಾರತದ ಗ್ರಾಮೀಣ ಪ್ರದೇಶಗಳು ಅತ್ಯುತ್ತಮ ನಿದರ್ಶನಗಳಾಗಿವೆ. ಇಲ್ಲಿ ಧರ್ಮಗಳು ಕೇವಲ ಸಾಂಸ್ಥಿಕ ಚೌಕಟ್ಟುಗಳಾಗಿ ಉಳಿಯದೆ, ದೈನಂದಿನ ಬದುಕಿನ ಭಾಗವಾಗಿ ಪರಸ್ಪರ ಬೆರೆತು ಹೋಗಿವೆ. ಈ ಸೌಹಾರ್ದ ಸಂಸ್ಕೃತಿಗೆ ಕರ್ನಾಟಕದಲ್ಲಿ ಅತ್ಯಂತ ಪ್ರಮುಖ ಸಾಕ್ಷಿಯಾಗಿ ನಿಲ್ಲುವುದು 'ಮೊಹರಂ ಆಚರಣೆ'. "ಇಸ್ಲಾಂ ಕ್ಯಾಲೆಂಡರ್‌ನ ಮೊದಲ ತಿಂಗಳಾದ ಮೊಹರಂನ ಹತ್ತನೆಯ ದಿನದಂದು (ಯೌಮ್-ಎ-ಅಶುರಾ) ಪ್ರವಾದಿ ಮಹಮ್ಮದರ ಮೊಮ್ಮಗ ಹಜರತ್ ಇಮಾಮ್ ಹುಸೇನ್ ಮತ್ತು ಅವರ 72 ಜನ ಅನುಯಾಯಿಗಳು ಸತ್ಯ ಮತ್ತು ನ್ಯಾಯದ ರಕ್ಷಣೆಗಾಗಿ ಕಾರ್ಬಲಾ ಮೈದಾನದಲ್ಲಿ ಹುತಾತ್ಮರಾದರು. ಈ ಶೋಕದ ನೆನಪೇ ಮೊಹರಂ ಆಚರಣೆಯ ಮೂಲವಾಗಿದೆ."[1] ಇಸ್ಲಾಂ ಧರ್ಮದ ಚಂದ್ರಮಾನ ಕ್ಯಾಲೆಂಡರ್‌ನ ಮೊದಲ ತಿಂಗಳಾದ ಮೊಹರಂ, ಜಾಗತಿಕ ಮಟ್ಟದಲ್ಲಿ ಇಮಾಮ್ ಹುಸೇನ್ ಅವರ ಬಲಿದಾನದ ಶೋಕಾಚರಣೆಯಾಗಿದ್ದರೆ, ಕರ್ನಾಟಕದ ಮಟ್ಟಿಗೆ ಅದು ಜಾತಿ, ಮತ, ಪಂಥಗಳ ಭೇದವನ್ನು ಮೀರಿದ ಒಂದು ಸಾಮೂಹಿಕ 'ಭಾವೈಕ್ಯತೆಯ ಹಬ್ಬ'ವಾಗಿ ರೂಪಾಂತರಗೊಂಡಿದೆ. "ಮೊಹರಂನಲ್ಲಿ ಸೆರೆ ಹಿಡಿಯಲಾಗುವ 'ಪೀರ್' ಅಥವಾ 'ಕೈಗಳು' ಕೇವಲ ಸಂಕೇತಗಳಲ್ಲ; ಅವು ಕಾರ್ಬಲಾದಲ್ಲಿ ಹುತಾತ್ಮರಾದವರ ಹಸ್ತಗಳನ್ನು ನೆನಪಿಸುವ ಐತಿಹಾಸಿಕ ಮತ್ತು ಧಾರ್ಮಿಕ ಪ್ರತೀಕಗಳು. ಇವುಗಳನ್ನು 'ಪಂಜಾ' ಎಂದೂ ಕರೆಯಲಾಗುತ್ತದೆಯಲ್ಲದೆ, ಇವುಗಳ ಪ್ರತಿಷ್ಠಾಪನೆಯು ಸೂಫಿ ಪರಂಪರೆಯ ಪ್ರಭಾವದಿಂದ ಬೆಳೆದು ಬಂದಿದೆ."[2] ಎಂಬುದನ್ನು ಪ್ರೊ. ಹೆಚ್. ಟಿ. ಪೋತೆ ಗುರುತಿಸುತ್ತಾರೆ.

## ಭಾರತ ಮತ್ತು ಕರ್ನಾಟಕಕ್ಕೆ ಮೊಹರಂ ಆಗಮನ:

ದಿಲ್ಲಿ ಸುಲ್ತಾನರ ಕಾಲದಲ್ಲಿ ಮತ್ತು ಪ್ರಮುಖವಾಗಿ ಮೊಘಲರ ಹಾಗೂ ಬಹುಮನಿ ಸುಲ್ತಾನರ ಆಳ್ವಿಕೆಯಲ್ಲಿ ಮೊಹರಂ ಆಚರಣೆಯು ಭಾರತದಲ್ಲಿ ವ್ಯಾಪಕ ಪ್ರಚಾರಕ್ಕೆ ಬಂದಿತು. ಕೇವಲ ಶಿಯಾ ಮುಸ್ಲಿಮರಿಗೆ ಸೀಮಿತವಾಗಿದ್ದ ಈ ಶೋಕಾಚರಣೆ, ಭಾರತದ ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಸಾರ್ವಜನಿಕ ಹಬ್ಬದ ಸ್ವರೂಪವನ್ನು ಪಡೆದುಕೊಂಡಿತು. ಕರ್ನಾಟಕದ ಮಣ್ಣಿನಲ್ಲಿ ಮೊಹರಂ ಆಚರಣೆ ಬೇರೂರಿದ ಇತಿಹಾಸವನ್ನು ಎಂ. ಎಂ. ಕಲಬುರ್ಗಿಯವರು ಹೀಗೆ ಗುರುತಿಸುತ್ತಾರೆ. "ಉತ್ತರ ಕರ್ನಾಟಕದ ಬಹುಮನಿ ಸುಲ್ತಾನರು ಮತ್ತು ಬಿಜಾಪುರದ

ಆದಿಲ್ ಶಾಹಿ ಅರಸರು ಮೊಹರಂ ಆಚರಣೆಗೆ ರಾಜಾಶ್ರಯ ನೀಡಿದರು. ಸೂಫಿ ಸಂತರ ಪ್ರಭಾವದಿಂದಾಗಿ ಈ ಆಚರಣೆಯು ಗ್ರಾಮೀಣ ಭಾಗದ ಜನಸಾಮಾನ್ಯರ ಮನಸ್ಸನ್ನು ಗೆದ್ದು, ಕನ್ನಡದ ಜನಪದದ ಅವಿಭಾಜ್ಯ ಅಂಗವಾಯಿತು."[3] 'ಭಾವೈಕ್ಯತೆ' ಎಂಬುದು "ಸಮಾಜದಲ್ಲಿ ವಿವಿಧ ಧರ್ಮ, ಜಾತಿ, ಭಾಷೆ, ಸಂಸ್ಕೃತಿ ಹಾಗೂ ಪಂಥಗಳನ್ನು ಸೇರಿದ ಜನರು ಪರಸ್ಪರ ಅರ್ಥೈಸುವಿಕೆ, ಗೌರವ ಮತ್ತು ಸಹಕಾರದ ಮನೋಭಾವದಿಂದ ಬದುಕುವುದನ್ನು ಸೂಚಿಸುತ್ತದೆ. ಇದು ಸಮಾಜದ ಶಾಂತಿ, ಪ್ರಗತಿ ಮತ್ತು ಏಕತೆಗಾಗಿ ಅಗತ್ಯವಾದ ಒಂದು ಮೌಲ್ಯ."[4] ಕೋಮು ಸೌಹಾರ್ದತೆ ಎಂದರೆ ಕೇವಲ ವಿಭಿನ್ನ ಧರ್ಮದ ಜನರು ಒಟ್ಟಿಗೆ ಶಾಂತಿಯುತವಾಗಿ ವಾಸಿಸುವುದು ಮಾತ್ರವಲ್ಲ; ಅದು ಪರಸ್ಪರ ವಿಶ್ವಾಸ, ಸಹಿಷ್ಣುತೆ ಮತ್ತು ಸಹಬಾಳ್ವೆಯ ಬದುಕನ್ನು ಕಟ್ಟಿಕೊಳ್ಳುವುದಾಗಿದೆ. "ಕರ್ನಾಟಕದ ಹಳ್ಳಿಗಳಲ್ಲಿ ಮೊಹರಂ ಎಂದರೆ ಮುಸ್ಲಿಮರಿಗಿಂತ ಹೆಚ್ಚಾಗಿ ಹಿಂದೂಗಳೇ ಮುಂಚೂಣಿಯಲ್ಲಿ ನಿಂತು ಆಚರಿಸುವ ಹಬ್ಬ. ಮುಸ್ಲಿಂ ಫಕೀರರೊಂದಿಗೆ ಹಿಂದೂಗಳು ಹೆಗಲಿಗೆ ಹೆಗಲು ಕೊಟ್ಟು 'ಅಲ್ಲಾ ಸಾಹೇಬ್ರ ಕೆಂಡ ಹಾಯುವುದು', ಮಂಟಪ ಕಟ್ಟುವುದು ಮತ್ತು ಹರಕೆ ಹೊರುವುದನ್ನು ಕಾಣಬಹುದು. ಇಲ್ಲಿ ಇಮಾಮ್ ಹುಸೇನನು ಧರ್ಮಗಳನ್ನು ಮೀರಿದ ಸಾಂಸ್ಕೃತಿಕ ನಾಯಕನಾಗಿ ನೆಲೆಸಿದ್ದಾನೆ."[5] ಇದು ಸಮಾಜದಲ್ಲಿ ಸಮಾನತೆ, ನ್ಯಾಯ, ಪರಸ್ಪರ ಗೌರವಗಳನ್ನು ಬೆಳೆಸುತ್ತದೆ. ದೇಶದ ಸಮಗ್ರ ಅಭಿವೃದ್ಧಿಗೆ ಜನರ ಏಕತೆ ಮುಖ್ಯ. ಸೌಹಾರ್ದತೆಯಿಲ್ಲದೆ ಸಾಮಾಜಿಕ ಅಶಾಂತಿ, ಕಲಹ, ಹಿಂಸೆ ಉಂಟಾಗಿ ರಾಷ್ಟ್ರದ ಶಕ್ತಿಯು ದುರ್ಬಲವಾಗುತ್ತದೆ. ಭಾರತವು ಬಹುಧಾರ್ಮಿಕ ಮತ್ತು ಬಹುಸಾಂಸ್ಕೃತಿಕ ದೇಶ. ಇಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಬೌದ್ಧ, ಜೈನ ಮುಂತಾದ ಹಲವು ಧರ್ಮದವರು ವಾಸಿಸುತ್ತಾರೆ. ಭಾಷಾ ವೈವಿಧ್ಯ, ಜನಪದ, ಹಬ್ಬ-ಹರಿದಿನಗಳ ವೈವಿಧ್ಯ ಭಾರತದ ವಿಶೇಷತೆ. ಇಂತಹ ದೇಶದಲ್ಲಿ ಶಾಂತಿ, ಸಮಾನತೆ ಮತ್ತು ಸಹಬಾಳ್ವೆಗೆ ಕೋಮು ಸೌಹಾರ್ದತೆ ಕೇಂದ್ರೀಯ ಅಸ್ತ್ರ.

**ಸಂಶೋಧನಾ ಉದ್ದೇಶಗಳು:**

- ಮೊಹರಂ ಆಚರಣೆಯ ಐತಿಹಾಸಿಕ ಮತ್ತು ಕರಬಲ ಯುದ್ಧದ ಹಿನ್ನೆಲೆಯನ್ನು ಜಾಗತಿಕ ಮತ್ತು ಪ್ರಾದೇಶಿಕ ನೆಲೆಯಲ್ಲಿ ಅರ್ಥೈಸುವುದು.
- ಉತ್ತರ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಮೊಹರಂ ಹೇಗೆ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಯಿತು ಎಂಬುದನ್ನು ಗುರುತಿಸುವುದು.
- 'ರಿವಾಯತ್' ಪದಗಳ ಸಾಹಿತ್ಯಿಕ ಮತ್ತು ಮಹತ್ವವನ್ನು ವಿಶ್ಲೇಷಿಸುವುದು.
- ಈ ಆಚರಣೆಯಲ್ಲಿ ಕಂಡುಬರುವ ಸಾಮಾಜಿಕ-ಸಾಂಸ್ಕೃತಿಕ ಸಾಮರಸ್ಯ ಮತ್ತು ಇಂದಿನ ಸಮಾಜಕ್ಕೆ ಅದರ ಪ್ರಸ್ತುತತೆಯನ್ನು ಮೌಲ್ಯೀಕರಿಸುವುದು.

**ಮೊಹರಂನ ಹಿನ್ನೆಲೆ:**

"ಕ್ರಿ.ಶ. 680 (ಹಿಜರಿ ಶಕೆ 61) ರಲ್ಲಿ ಇರಾಕ್‌ನ 'ಕರಬಲ' ಎಂಬ

ಮರುಭೂಮಿಯಲ್ಲಿ ನಡೆದ ಐತಿಹಾಸಿಕ ಘಟನೆಯೇ ಮೊಹರಂ ಆಚರಣೆಯ ಮೂಲ ಪ್ರೇರಣೆ."[6] ಪ್ರವಾದಿ ಮೊಹಮ್ಮದರ ಮೊಮ್ಮಗ, ಹಜರತ್ ಅಲಿ ಮತ್ತು ಫಾತಿಮಾ ದಂಪತಿಗಳ ಪುತ್ರರಾದ ಇಮಾಮ್ ಹುಸೇನ್ ಮತ್ತು ಅವರ 72 ಮಂದಿ ಅನುಯಾಯಿಗಳು ಅಂದಿನ ಕ್ರೂರ ದೊರೆ ಯಜೀದನ ಸರ್ವಾಧಿಕಾರ ಮತ್ತು ಅಧರ್ಮದ ವಿರುದ್ಧ ಧರ್ಮಯುದ್ಧ ಹೂಡಿದರು. ಆಗ ಅವರಿಗೆ ನೀರನ್ನೂ ಕೊಡದೆ ಇಮಾಮ್ ಹುಸೇನ್ ಮತ್ತು ಅವರ ಪರಿವಾರವನ್ನು ಕರಬಲ ಮರುಭೂಮಿಯಲ್ಲಿ ಹತ್ಯೆ ಮಾಡಲಾಯಿತು. ಈ ಮಹಾನ್ ತ್ಯಾಗ ಮತ್ತು ಬಲಿದಾನದ ನೆನಪಿಗಾಗಿ ಮುಸ್ಲಿಂ ಸಮುದಾಯವು ಮೊಹರಂ ತಿಂಗಳ ಮೊದಲ ಹತ್ತು ದಿನಗಳನ್ನು ಶೋಕಾಚರಣೆಯಾಗಿ ಆಚರಿಸುತ್ತದೆ.

**ಭಾವೈಕ್ಯತೆಯ ಸಾಮರಸ್ಯ:**

ಧರ್ಮಗಳು ಜನರ ಬದುಕನ್ನು ಮುಕ್ಕಾಗಿಸುವ, ಮನಸುಗಳನ್ನು ಮುರಿಯುವ ಈ ಹೊತ್ತಿನಲ್ಲಿ ಹೃದಯದ ಬಿಂಬವೂ ಆಗಿರುವ ಮೊಹರಂ ಜನರ ಬದುಕನ್ನು ಸದಾ ಎಚ್ಚರಿಸುತ್ತಲೇ ಇರುತ್ತದೆ. ಬದುಕಿನ ವಿಕೃತಿಗಳನ್ನು ಗುರುತಿಸುವ ವಾಸ್ತವಿಕ ದೃಷ್ಟಿ, ಮತ್ತು ಅಸ್ತಿತ್ವದ ಸೂಕ್ಷ್ಮ ಸ್ತರಗಳ ಅನಾವರಣಗೊಳಿಸುವ ತೀಕ್ಷ್ಣ ಒಳನೋಟದ ದಾಖಲೆಯಾಗಿಯೂ ಈ ಹಬ್ಬ ನಮ್ಮ ಮುಂದಿದೆ. ಉಡುವ ಬಟ್ಟೆ, ಉಣ್ಣುವ ಊಟ, ನಡೆದಾಡುವ ಕಾಲ ಎಲ್ಲವೂ ರಾಜಕಾರಣಗೊಳ್ಳುತ್ತಿರುವ ಈ ದೇಶದಲ್ಲಿ ಬಹುತ್ವ ತನ್ನತನ ಕಳೆದುಕೊಳ್ಳದೆ ಕರ್ನಾಟಕ ಬಹುತ್ವದ ನಾಡಾಗಿಯೇ ಉಳಿಯಬೇಕೆಂಬ ಆಶಾವಾದ ನನ್ನದು. ಆಧುನಿಕ ಜಗತ್ತಿನಲ್ಲಿ ಕೋಮು ಧ್ರುವೀಕರಣ ಮತ್ತು ಧಾರ್ಮಿಕ ಅಸಹಿಷ್ಣುತೆ ಹೆಚ್ಚಾಗುತ್ತಿರುವ ಇಂದಿನ ಸಂದರ್ಭದಲ್ಲಿ, ನೂರಾರು ವರ್ಷಗಳಿಂದ ಗ್ರಾಮೀಣ ಭಾರತದಲ್ಲಿ ನಡೆದುಕೊಂಡು ಬಂದಿರುವ ಹಿಂದೂ-ಮುಸ್ಲಿಂ ಸೌಹಾರ್ದತೆಯ ನೆಲೆಗಳನ್ನು ಹುಡುಕುವುದು ಅತ್ಯಂತ ಪ್ರಸ್ತುತವಾಗಿದೆ. ಮುಸ್ಲಿಂ ಬಾಂಧವರೇ ಇಲ್ಲದ ಹಳ್ಳಿಗಳಲ್ಲಿ ಹಿಂದೂಗಳೇ ಮೊಹರಂ ಹಬ್ಬವನ್ನು ಮುಂಚೂಣಿಯಲ್ಲಿ ನಿಂತು ಆಚರಿಸುವ ಅಪರೂಪದ ಸಂಪ್ರದಾಯವನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಆಶಯವಾಗಿದೆ.

ಕರ್ನಾಟಕದ ಹಳ್ಳಿಗಳಲ್ಲಿ ಮೊಹರಂ ಎಂಬ ಪದಕ್ಕಿಂತ 'ಪೀರ್ಲ ಹಬ್ಬ' ಅಥವಾ 'ದೇವರ ಹಬ್ಬ' ಎಂದೇ ಇದು ಪ್ರಸಿದ್ಧವಾಗಿದೆ. 'ಪೀರ್' ಎಂದರೆ ಪವಿತ್ರ ವ್ಯಕ್ತಿ ಅಥವಾ ಧರ್ಮಗುರು ಎಂದರ್ಥ. ಇಮಾಮ್ ಹುಸೇನ್ ಮತ್ತು ಅವರ ಸಹೋದರ ಹಸನ್ ಅವರನ್ನು ಗ್ರಾಮೀಣ ಜನತೆ 'ಪೀರ್ಲ ಸಾಹೇಬರು' ಅಥವಾ 'ಹಸನ್-ಹುಸೇನರು' ಎಂದು ಕರೆಯುತ್ತಾರೆ. ಈ ಭಾಗದಲ್ಲಿ ಇಸ್ಲಾಂನ ಐತಿಹಾಸಿಕ ವ್ಯಕ್ತಿಗಳು ಸ್ಥಳೀಯ ಗ್ರಾಮದೇವತೆಗಳಷ್ಟೇ ಆಪ್ತವಾಗಿ ಆರಾಧಿಸಲ್ಪಡುತ್ತಾರೆ. ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ನೂರಾರು ಹಳ್ಳಿಗಳಲ್ಲಿ ಮುಸ್ಲಿಂ ಕುಟುಂಬಗಳೇ ಇಲ್ಲ. ಆದರೂ ಅಲ್ಲಿನ ಹಿಂದೂ ಸಮುದಾಯದವರೇ ಪೀರ್ಲ ಹಬ್ಬವನ್ನು ನಿರ್ವಹಿಸುತ್ತಾರೆ. ಈ ರೀತಿಯ

ಭಾವೈಕ್ಯತೆಯು ಕಲ್ಯಾಣ ಕರ್ನಾಟಕದ ಬಹುದೊಡ್ಡ ಸಾಧನೆ.

ಮಕ್ಕಳಿಲ್ಲದವರು, ಕಾಯಿಲೆ ಬಂದವರು ಪೀರ್ಲ ದೇವರಿಗೆ ಹರಕೆ ಹೊರುತ್ತಾರೆ. ಹರಕೆ ತೀರಿದ ಮೇಲೆ ಮಕ್ಕಳಿಗೆ 'ಹುಸೇನಪ್ಪ', 'ಹಸನಪ್ಪ', 'ಪೀರಪ್ಪ', 'ಫಾತಿಮಾ' ಎಂದು ಹೆಸರಿಡುವ ನೂರಾರು ಹಿಂದೂಗಳನ್ನು ಕರ್ನಾಟಕದಲ್ಲಿ ನಾವಿಂದಿಗೂ ಕಾಣಬಹುದು. ಹಬ್ಬದ ದಿನಗಳಲ್ಲಿ ಭಕ್ತರು ಹೆಗಲಿಗೆ ಹಸಿರು ನೂಲಿನ ಜವನ ಕಟ್ಟಿ 'ಫಕೀರ' ವೇಷ ಧರಿಸುತ್ತಾರೆ. ಹಳ್ಳಿ ಹಳ್ಳಿ ತಿರುಗಿ 'ಫಕೀರರ ಭಿಕ್ಷೆ' ಬೇಡಿ, ಅದನ್ನು ದೇವರಿಗೆ ಅರ್ಪಿಸುತ್ತಾರೆ. ಇದರಲ್ಲಿ ಶೇ. 80 ಕ್ಕಿಂತ ಹೆಚ್ಚು ಜನ ಹಿಂದೂಗಳೇ ಇರುತ್ತಾರೆ ಎಂಬುದು ಗಮನಾರ್ಹ. ಶೋಕಾಚರಣೆಯ ನಡುವೆಯೂ ಇದು ಲೋಕೋತ್ಸವವಾಗಿರುವುದರಿಂದ, ಯುವಕರು ಮೈಗೆಲ್ಲಾ ಬಣ್ಣ ಬಳಿದುಕೊಂಡು ಹುಲಿ ವೇಷ ಧರಿಸಿ ಕುಣಿಯುತ್ತಾರೆ. ತಮಟೆ, ಡೋಲುಗಳ ಸದ್ದಿಗೆ ಇಡೀ ಗ್ರಾಮವೇ ಜೊತೆಯಾಗಿ ಹೆಜ್ಜೆ ಹಾಕುತ್ತದೆ. ಇದರ ಜೊತೆಗೆ 'ಕಳ್ಳಳ್ಳಿ' ವೇಷ ಹಾಕಿ ಹಳ್ಳಿ ಹಳ್ಳಿಗೆ ತಿರುಗಿ ಭಿಕ್ಷೆ ಬೇಡಿ, ಅದನ್ನು ದೇವರಿಗೆ ಅರ್ಪಿಸುತ್ತಾರೆ. ರಾತ್ರಿಯ ಸಮಯದಲ್ಲಿ ಹಳ್ಳಿಯ ಚಾವಡಿಯ ಮುಂದೆ ಅಥವಾ ಆಲದ ಮರದ ಕೆಳಗೆ ಸಣ್ಣ ಜಗಲಿ ಕಟ್ಟಿ, ಮಧ್ಯದಲ್ಲಿ ಬೆಂಕಿ ಹಾಕಿ, ಕೈಯಲ್ಲಿ 'ಖಂಜರಿ' (ಕೈಗಂಜರೆ) ಹಿಡಿದು ವೃತ್ತಾಕಾರದಲ್ಲಿ ಸುತ್ತುತ್ತಾ ಹೆಜ್ಜೆ ಹಾಕಿ ಹಾಡನ್ನು ಹಾಡುತ್ತಾರೆ. ಹಾಡುವವರು ಒಬ್ಬರು ಹಿಂದೂ ಆಗಿದ್ದರೆ, ದನಿಗೂಡಿಸುವವರು ಮುಸ್ಲಿಂ ಆಗಿರುತ್ತಾರೆ. ಇದು ಕೇವಲ ಕಲೆಯಲ್ಲ, ಎರಡು ಧರ್ಮಗಳ ಆತ್ಮದ ಮಿಲನ. ಚಾವಡಿಯ ಮುಂದೆ ದೊಡ್ಡ ಕಂದಕ ತೋಡಿ ಅದರಲ್ಲಿ ಒಣ ಮರಗಳನ್ನು ಹಾಕಿ ಬೆಂಕಿ ಹಚ್ಚಲಾಗುತ್ತದೆ. ಇದನ್ನು 'ಅಲಾವಿ' ಎನ್ನುತ್ತಾರೆ. ಒಂಬತ್ತನೇ ರಾತ್ರಿ ಉರಿಯುವ ಕೆಂಡದ ಮೇಲೆ ಹಿಂದೂಗಳು ಮತ್ತು ಮುಸ್ಲಿಮರು "ಯಾ ಅಲಿ, ಯಾ ಹುಸೇನ್" ಎಂದು ಕೂಗುತ್ತಾ ಯಾವುದೇ ಗಾಯವಿಲ್ಲದೆ ದಾಟುತ್ತಾರೆ. ಇದು ಅವರ ಅಚಲವಾದ ಶ್ರದ್ಧೆಯ ಸಂಕೇತವಾಗಿದೆ.

ಹೀಗೆ ಈ ಭಾಗವು ಕೋಮುಸೌಹಾರ್ದತೆಗೆ ಹೆಸರಾದ ನಾಡು ಎಂಬುದಕ್ಕೆ ಇನ್ನಷ್ಟು ಜೀವಂತ ನಿದರ್ಶನಗಳನ್ನು ನೀಡಬಹುದು. ಉದಾಹರಣೆಗೆ, "ಸುರಪುರ ತಾಲೂಕಿನ ಕೊಡಕಲ್ ಗ್ರಾಮದಲ್ಲಿ ನೆಲೆನಿಂತ ಶರಣ ಕೊಡಕಲ್ ಬಸವಣ್ಣ ಜಾತಿ, ಮತಗಳನ್ನು ಮೀರಿನಿಂತ ಸಂತ. ಮುಸ್ಲಿಮರು ಈತನಿಗೆ ಸಮಾಧಿ ನಿರ್ಮಿಸಿದ್ದು, ಅದರ ಮೇಲೆ ಭವ್ಯ ಮಠವಿದೆ. ಈ ಮಠ ಹಿಂದೂ-ಮುಸ್ಲಿಮರ ಯಾತ್ರಾಸ್ಥಳವಾಗಿದೆ. ಕಲಬುರಗಿ ನಗರದಲ್ಲಿರುವ ಹಜರತ್ ಖಾಜಾ ಬಂದೇನವಾಜರ ದರ್ಗಾ ಹಜರತ್ ಖಾಜಾ ಬಂದೇನವಾಜರ ಸಮಾಧಿ. ಹಜರತ್ ಖಾಜಾ ಬಂದೇನವಾಜರು ಒಬ್ಬ ಸಂತರು, ಮಹಾತ್ಮರು, ಜಾತಿ, ಮತ, ಪಂಥ ಯಾವ ಭೇದ-ಭಾವಗಳಿಲ್ಲದೆ ಎಲ್ಲಾ ಜನರೂ ಅವರನ್ನು ಗೌರವಿಸುತ್ತಾರೆ. ಅವರ ದರ್ಗಾ ದಕ್ಷಿಣ ಭಾರತದಲ್ಲೇ ಅತ್ಯಂತ ಶ್ರೇಷ್ಠವಾದುದಾಗಿದೆ. ಇಲ್ಲಿ ನಡೆಯುವ ಉರುಸಿಗೆ ದೇಶದ ನಾನಾ ಮೂಲೆಗಳಿಂದ ಜನರು ಬರುವರು. ಇದು ಆ ಭಾಗದ ಸಾಂಸ್ಕೃತಿಕ ಕೇಂದ್ರವೂ ಆಗಿದೆ."[7]

**ಸಮಕಾಲೀನ ನೋಟ:**

ಗ್ರಾಮೀಣ ಯುವಕರು ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುತ್ತಿರುವುದರಿಂದ ಹಳ್ಳಿಗಳಲ್ಲಿ ಹಬ್ಬದ ಕಳೆ ಕುಂದುತ್ತಿದೆ. ಇತ್ತೀಚಿನ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಗಳು ಗ್ರಾಮೀಣ ಸೌಹಾರ್ದತೆಯ ಮೇಲೂ ಸಣ್ಣ ನೆರಳನ್ನು ಬೀರುತ್ತಿವೆ. ಕೆಲವು ಕಡೆಗಳಲ್ಲಿ ಕಟ್ಟುನಿಟ್ಟಿನ ಧಾರ್ಮಿಕ ಆಚರಣೆಗಳ ಒತ್ತಡದಿಂದಾಗಿ ಹಿಂದೂಗಳ ಪಾಲ್ಗೊಳ್ಳುವಿಕೆಯನ್ನು ವಿರೋಧಿಸುವ ಅಥವಾ ಹಿಂದೂಗಳೇ ದೂರ ಸರಿಯುವ ಪ್ರವೃತ್ತಿ ಕಾಣಿಸಿಕೊಳ್ಳುತ್ತಿದೆ. ಸಾಂಪ್ರದಾಯಿಕ ರಿವಾಯತ್ ಪದಗಳ ಜಾಗವನ್ನು ಇಂದು ಡಿಜೆ ಹಾಡುಗಳು ಆಕ್ರಮಿಸಿಕೊಳ್ಳುತ್ತಿದ್ದು, ಸಾಂಸ್ಕೃತಿಕ ಆಳ ಕಡಿಮೆಯಾಗುತ್ತಿದೆ. ಇಷ್ಟೆಲ್ಲಾ ಸವಾಲುಗಳ ಮಧ್ಯೆಯೂ ಮೊಹರಂ ಇಂದಿಗೂ ಸಮಾಜಕ್ಕೆ ಅತ್ಯಂತ ದೊಡ್ಡ ಪಾಠವನ್ನು ಕಲಿಸುತ್ತಿದೆ. ಇಮಾಮ್ ಹುಸೇನರ ಹೋರಾಟ ಕೇವಲ ಒಂದು ಧರ್ಮಕ್ಕಷ್ಟೇ ಸೀಮಿತವಾಗಿರಲಿಲ್ಲ, ಅದು ಅನ್ಯಾಯದ ವಿರುದ್ಧದ ಜಾಗತಿಕ ಹೋರಾಟವಾಗಿತ್ತು. ಅದನ್ನು ಭಾರತೀಯರು ಸ್ವೀಕರಿಸಿದ ರೀತಿ ಅನನ್ಯ. ಜಗತ್ತಿನಾದ್ಯಂತ ಧರ್ಮದ ಹೆಸರಿನಲ್ಲಿ ಯುದ್ಧಗಳು ನಡೆಯುತ್ತಿರುವಾಗ, ಭಾರತದ ಹಳ್ಳಿಗಳು ಮೊಹರಂ ಮೂಲಕ ಶಾಂತಿ ಮತ್ತು ಸಹಬಾಳ್ವೆಯ ಜಾಗತಿಕ ಮಾದರಿಯನ್ನು ಪ್ರದರ್ಶಿಸುತ್ತಿವೆ. ಮೊಹರಂ ಕರ್ನಾಟಕದಲ್ಲಿ ಕೇವಲ ಧಾರ್ಮಿಕ ಆಚರಣೆಯಾಗಿ ಉಳಿಯದೆ, ಒಂದು ಸಾಂಸ್ಕೃತಿಕ ಕೊಂಡಿಯಾಗಿ ಮಾರ್ಪಟ್ಟಿದೆ. ಭಾಷೆ, ಸಾಹಿತ್ಯ ಮತ್ತು ಆಚರಣೆಗಳ ಮೂಲಕ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳು ಪರಸ್ಪರರ ಧಾರ್ಮಿಕ ನಂಬಿಕೆಗಳನ್ನು ಗೌರವಿಸುವುದನ್ನು ಕರಗತ ಮಾಡಿಕೊಂಡಿವೆ. ಗ್ರಾಮೀಣ ಭಾರತದ ಒಗ್ಗಟ್ಟು ಮತ್ತು ಸೌಹಾರ್ದತೆಗೆ 'ಪೀರ್ಲ ಹಬ್ಬ' ಅತ್ಯಂತ ಭದ್ರವಾದ ಬುನಾದಿಯಾಗಿದೆ. ಧರ್ಮಗಳು ಮನುಷ್ಯರನ್ನು ದೂರ ಮಾಡಬಾರದು, ಬದಲಿಗೆ ಹತ್ತಿರ ತರಬೇಕು ಎಂಬುದಕ್ಕೆ ಮೊಹರಂ ಅತ್ಯುತ್ತಮ ಸಾಕ್ಷಿ. ಹಿಂದೂ ಮತ್ತು ಮುಸ್ಲಿಂ ಬಾಂಧವರು ಒಟ್ಟಾಗಿ ಆಚರಿಸುವ ಈ ಪೀರ್ಲ ಹಬ್ಬವು ಕೇವಲ ಹತ್ತು ದಿನಗಳ ಸಡಗರವಾಗದೆ, ವರ್ಷದ ಮುನ್ನೂರ ಅರವತ್ತೈದು ದಿನಗಳೂ ನಮ್ಮ ಮನಸ್ಸಿನಲ್ಲಿ ಸೌಹಾರ್ದತೆಯ ಸಾರವನ್ನು ಮೂಡಿಸಬೇಕಿದೆ. ಈ ವಿಶಿಷ್ಟ ಜಾನಪದ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**ಕೊನೆ ಟಿಪ್ಪಣಿಗಳು:**

1. ಪ್ರಹ್ಲಾದ್ ಕಾವೀರ್, (2010), ಕರ್ನಾಟಕದ ಮೊಹರಂ ಜಾನಪದ ಸಂಸ್ಕೃತಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.ಸಂ. 12.
2. ಪೋತೆ ಹೆಚ್.ಟಿ., (2003), ಮೊಹರಂ ಪದಗಳು ಮತ್ತು ಆಚರಣೆ, ಕಲಬುರಗಿ: ಚೇತನ ಪ್ರಕಾಶನ, ಪು.ಸಂ. 42.
3. ಕಲಬುರ್ಗಿ ಎಂ.ಎಂ., (1974), ಧಾರವಾಡ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಧಾರವಾಡ:

ಕರ್ನಾಟಕ ವಿಶ್ವವಿದ್ಯಾಲಯ, ಪು.ಸಂ. 124.
4. ಶೇಖ್ ಅಲಿ, (2004), ಭಾರತದಲ್ಲಿ ಇಸ್ಲಾಂ ಮತ್ತು ಸೂಫಿ ಪಂಥದ ಇತಿಹಾಸ, ಬೆಂಗಳೂರು: ನವಕರ್ನಾಟಕ ಪ್ರಕಾಶನ, ಪು.ಸಂ. 88.
5. ಚಂದ್ರಶೇಖರ ಕಂಬಾರ, (1982) ಕರ್ನಾಟಕದ ಜನಪದ ರಂಗಭೂಮಿ ಮತ್ತು ಆಚರಣೆಗಳು, ಸಾಗರ: ಅಕ್ಷರ ಪ್ರಕಾಶನ, ಪು.ಸಂ. 210.
6. ಪ್ರಹ್ಲಾದ್ ಕಾವೀರ್, (2003), ಕರ್ನಾಟಕದ ಮೊಹರಂ ಜಾನಪದ ಸಂಸ್ಕೃತಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.ಸಂ. 18.
7. ಭಾಸ್ಕರ್ ಟಿ. ಎಂ. ಮತ್ತು ಶ್ರೀ ರಾಜಶೇಖರ ಹತಗುಂದಿ, (2005), ಕಲಬುರ್ಗಿ ಜಿಲ್ಲಾ ದರ್ಶನ, ಗುಲಬರ್ಗಾ: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಪು.ಸಂ. 3.

## ಪರಾಮರ್ಶನ ಗ್ರಂಥಗಳು:


1. ಶೇಖ್ ಅಲಿ, (2004), ಭಾರತದಲ್ಲಿ ಇಸ್ಲಾಂ ಮತ್ತು ಸೂಫಿ ಪಂಥದ ಇತಿಹಾಸ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
2. ಪರಮಶಿವಯ್ಯ ಜಿ.ಎಸ್., (1982), ಕರ್ನಾಟಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
3. ಸಿದ್ದಲಿಂಗ ಇಮ್ರಾಪುರ, (1979), ನಮ್ಮ ಜನಪದ ರಿವಾಯತ್ ಪದಗಳು, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
4. ಕಲಬುರ್ಗಿ ಎಂ.ಎಂ., (1999), ಕರ್ನಾಟಕದ ಸೂಫಿ ಸಂತರು ಮತ್ತು ಸಾಂಸ್ಕೃತಿಕ ಸಾಮರಸ್ಯ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಸಯ್ಯದ್ ಜಫರ್ ಖಾದ್ರಿ, ಕರಬಲದ ಮಹಾ ಬಲಿದಾನ ಮತ್ತು ಸೂಫಿ ನೆಲೆಗಳು, ಬೆಂಗಳೂರು: ನವಕರ್ನಾಟಕ ಪ್ರಕಾಶನ.
6. ಕರ್ನಾಟಕ ಗ್ಯಾಸೆಟಿಯರ್, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ವರದಿಗಳು, ಬೆಂಗಳೂರು: ಕರ್ನಾಟಕ ಸರ್ಕಾರ.
7. ಪ್ರಹ್ಲಾದ್ ಕಲಾವೀರ್, (2010), ಕರ್ನಾಟಕದ ಮೊಹರಂ ಜಾನಪದ ಸಂಸ್ಕೃತಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
8. ಪೋತೆ ಹೆಚ್.ಟಿ., (2003) ಮೊಹರಂ ಪದಗಳು ಮತ್ತು ಆಚರಣೆ, ಕಲಬುರಗಿ: ಚೇತನ ಪ್ರಕಾಶನ.
9. ಕಲಬುರ್ಗಿ ಎಂ.ಎಂ., (1974), ಧಾರವಾಡ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.
10. ಚಂದ್ರಶೇಖರ ಕಂಬಾರ, (1982), ಕರ್ನಾಟಕದ ಜನಪದ ರಂಗಭೂಮಿ ಮತ್ತು ಆಚರಣೆಗಳು, ಸಾಗರ: ಅಕ್ಷರ ಪ್ರಕಾಶನ.
11. ಭಾಸ್ಕರ್ ಟಿ.ಎಂ. ಮತ್ತು ರಾಜಶೇಖರ ಹತಗುಂದಿ, (2005), ಕಲಬುರ್ಗಿ ಜಿಲ್ಲಾ ದರ್ಶನ, ಗುಲಬರ್ಗಾ: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ.